ಮಲೆನಾಡು ಇಂಜಿನಿಯರಿಂಗ್ ಎಜುಕೇಶನ್ ಸೊಸೈಟಿಯವರು ಆ ಸಂಸ್ಥೆಯನ್ನು ನಡೆಸುವುದಕ್ಕೆ ಹಣದ ಅಭಾವದಿಂದ ತೊಂದರೆಯಾಗಿರುವುದರಿಂದಲೂ, ಮತ್ತು ಅಧ್ಯಾಪಕವರ್ಗದವರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲದಿರುವುದರಿಂದಲೂ, ಈ ಅಗ್ರಿಮೆಂಟಿನಲ್ಲಿ ರಾಜ್ಯಸರ್ಕಾರದವರು ಕಮಿಟಿ ಮಾಡಿಕೊಂಡಿರುವುದರಿಂದಲೂ, ಅದನ್ನು ಮೈಸೂರು ಸರ್ಕಾರ ವಹಿಸಿಕೊಂಡು ನಡೆಸುವುದೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರದವರು ವಹಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಸಂಬಂಧಪಟ್ಟ ಖರ್ಚಿನ ರೇಷಿಯೋ ಪ್ರಕಾರ ಸರ್ಕಾರ ಅದನ್ನು ವಹಿಸಲು ಸಿದ್ಧವಿದೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಮಲೆನಾಡು ಎಜುಕೇಶನ್ ಸೊಸೈಟಿಯವರು ಅದನ್ನು ನಡೆಸುವುದಕ್ಕೆ ಸಾಧ್ಯವಿಲ್ಲದಾಗ, ಅದನ್ನು ಮುಚ್ಚಬೇಕೆಂದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥ ಯಾವ ಪ್ರೊಪೋಸಲ್ಸ್ ಸರ್ಕಾರದ ಮುಂದೆ ಇದುವರೆಗೂ ಬಂದಿಲ್ಲ. ಅಂಥದ್ದು ಏನಾದರೂ ಬಂದರೆ ಪರಿಶೀಲನೆ ಮಾಡಬಹುದು.

ಶ್ರೀ ಬಿ. ನಂಜಪ್ಪ.—ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ವಿದ್ಯಾಭ್ಯಾಸ ಅತ್ಯುತ್ತಮವಾಗಿದೆ ಮತ್ತು ಅದರ ಹೆಸರು ಬಹಳ ಪ್ರಖ್ಯಾತವಾಗಿದೆ. ಆದ್ದರಿಂದ ಇದನ್ನು ವಹಿಸಿಕೊಳ್ಳುವುದಕ್ಕೆ ಸರ್ಕಾರದವರಿಗೆ ಇರುವ ತೊಂದರೆ ಏನೆಂದು ನಿರ್ದಿಷ್ಟವಾಗಿ ಹೇಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ಪ್ರೊಪೋಸಲ್ ಇಲ್ಲವೆಂದು ಹೇಳಿದಾಗ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ವಿದ್ಯಾ ಸಂಸ್ಥೆಯ ಅಗ್ರಿಮೆಂಟ್ ಪ್ರಕಾರ ಅದು ಕೊಡಬೇಕಾದ ಹಣವನ್ನು ಕೊಡಲಿಲ್ಲವೇ, ಮತ್ತು ಮೊದಲನೆಯ 5 ವರ್ಷದಲ್ಲಿ ಕೊಡಬೇಕಾದ ಖೋತಾ ಹಣವನ್ನು ಸರ್ಕಾರದವರು ಕೊಡಲು ಒಪ್ಪಿಕೊಂಡಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥದ್ದು ಯಾವುದೂ ಆಗಿಲ್ಲ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಮೈಸೂರು ರಾಜ್ಯದಲ್ಲಿ ಇರುವ ಎರ್ಲಾ ಕಾಲೇಜುಗಳಿಗಿಂತ ಕಡಿಮೆ ವಿದ್ಯಾರ್ಥಿಗಳು ಇಲ್ಲಿ ಬರುತ್ತಿದ್ದಾರೆ. ಪ್ರಾರಂಭ ಮಾಡಿದಾಗ ಸಿವಿಲ್ ಸೆಕ್ಷನ್ 60, ಮೆಕ್ಯಾನಿಕಲ್ 30, ಟೆಕ್ಸ್‌ಟೈಲ್ 30, ಹೀಗೆ ಒಟ್ಟು 120 ಇನ್‌ಟೇಕ್ ಇತ್ತು. ಈಗ ಕೇವಲ 40–45 ಆಗಿರುವುದರಿಂದ ಹೆಚ್ಚು ಆರ್ಥಿಕ ಕೊರತೆಯಲ್ಲಿ ಅದು ಬೀಳುತ್ತದೆ. ಆದ್ದರಿಂದ ಅದರ ಆರ್ಥಿಕ ಹೊಣೆಯನ್ನು ಹೊತ್ತುಕೊಂಡು ಅರ್ಧ ಕೋಟಿ ಖರ್ಚು ಮಾಡಿದಂತಹ ಈ ಸಂಸ್ಥೆಯನ್ನು ಸರ್ಕಾರದವರು ನಡೆಸುವುದಕ್ಕೆ ಸಿದ್ಧವಾಗಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ರೀತಿ ಮ್ಯಾನೇಜ್‌ಮೆಂಟ್ ಪ್ರೊಪೋಸಲ್ಸ್ ಕಳುಹಿಸಿಲ್ಲ, ಕಳುಹಿಸಿದರೆ ನೋಡೋಣ.

Conditions for opening of new private Colleges in the State

416. Sri SIDDIAH KASHIMATH (Shirhatti).—

Will the Minister for Education be pleased to state :—

(*a*) the number of private colleges opened after 1966 that have been given grant-in-aid by the Government ;

(*b*) the conditions to be fulfilled by the private management for opening new Arts and Science Colleges and getting grant-in-aids from Government ?

Sri N. M. KOTRABASAIAH SOGI (Deputy Minister for Education).—

(*a*) 15, under the Grant-in-aid Code.

(*b*) The conditions to be fulfilled by the Private Management for opening new Arts and Science Colleges, are as laid down by the concerned Universities. As regards grant-in-aid, it is not the policy of Government to sanction grant-in-aid to newly started Colleges, though certain *ad hoc* grants were sanctioned in 1967-68 and 1968-69.

ಶ್ರೀ ಸಿದ್ದಯ್ಯ, ಕಾಶೀಮಠ.—1966-67ರಲ್ಲಿ ಲಕ್ಷ್ಮೇಶ್ವರ ಆರ್ಟ್ಸ್ ಕಾಲೇಜು ಸ್ಥಾಪನೆ ಮಾಡಿದಾಗ ಸಹಾಯ ಧನವನ್ನು ಕೊಡದಿರುವುದಕ್ಕೆ ಕಾರಣವೇನು ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ್ಯಡ್ ಹಾಕ್ ಗ್ರಾಂಟ್ ಕೊಡಬೇಕೆಂದು ಪ್ರೊಪೋಸಲ್ಸ್ ಸರ್ಕಾರದ ಮುಂದೆ ಇದೆ.

ಶ್ರೀ ಸಿದ್ದಯ್ಯ, ಕಾಶೀಮಠ.—ಹಣದ ಅಭಾವದಿಂದ ನಡೆಸದೆ ಇರತಕ್ಕ ಕಾಲೇಜುಗಳನ್ನು ಸರ್ಕಾರದವರು ತೆಗೆದುಕೊಂಡು ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—1966 ರಿಂದೀಚೆಗೆ ಕಾಲೇಜುಗಳನ್ನು ಸ್ಥಾಪನೆ ಮಾಡಿದಾಗ ಸರ್ಕಾರದವರ ಸಹಾಯಧನ ಭರವಸೆಯ ಮೇಲೆ ಕಾಲೇಜು ಸ್ಥಾಪನೆ ಮಾಡಬಾರದು ಮತ್ತು ಕಾಲೇಜು ಸ್ಥಾಪನೆ ಮಾಡುವುದಾದರೆ, ಸ್ವಂತ ಶಕ್ತಿಯಮೇರೆ ಮಾಡಬೇಕೆಂದು ಸ್ಪಷ್ಟೀಕರಿಸಿದ್ದೇವೆ. ಅಂಥ ಸಂಸ್ಥೆಗಳಿಗೆ 50 ಪರ್ಸೆಂಟ್ ಆ್ಯಡ್ ಹಾಕ್ ಗ್ರಾಂಟ್ ಕೊಡುತ್ತಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಖಾಸಗೀಯವರು ಕಾಲೇಜನ್ನು ಸ್ಥಾಪನೆ ಮಾಡದೆ ಹೋದರೆ ಸರ್ಕಾರಿ ಕಾಲೇಜುಗಳಲ್ಲಿ ರಶ್ ಆಗಿ, ಮಾರಾಮಾರಿಯಾಗುತ್ತಿತ್ತು. ಹಾಗಿರುವಾಗ ಖಾಸಗೀಯವರಿಗೆ ಸ್ಥಾಪನೆ ಮಾಡಿದರೆ, ಗ್ರಾಂಟು ಇಲ್ಲವೆಂದು ಹೇಳುವುದರ ಪ್ರೆಶಿಷ್ಯವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಆದರೂ ಕೂಡ ಸರ್ಕಾರದವರಿಗೆ ಲೀಗರ್ ಕಮಿಟ್‌ಮೆಂಟ್ ಇಲ್ಲದಿದ್ದರೂ ಸಹ, ಇತ್ತೀಚೆಗೆ ಸ್ಥಾಪನೆಯಾದಂತಹ ಕಾಲೇಜುಗಳಿಗೆ 50 ಪರ್‌ಸೆಂಟ್ ಆ್ಯಡ್ ಹಾಕ್ ಗ್ರಾಂಟ್ ಕೊಡಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಮಾಡತಕ್ಕಂತಹ ಖಾಸಗೀ ಸಂಸ್ಥೆಗಳಿಗೆ 1966 ರಿಂದೀಚೆಗೆ ಯಾವ ಒಂದು ಸಹಾಯವನ್ನು ಕೂಡ ಸರ್ಕಾರದವರು ಕೊಡುವುದಿಲ್ಲವೆಂದು ಹೇಳಿದ್ದೀರಿ. ತಾವು ಅವುಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಹಾಗೆ ಕೊಟ್ಟ ಮೇರೆ ಸಂಸ್ಥೆಯವರು ಸರಿಯಾಗಿ ನಡೆಸದೆ ಹೋದರೆ, ಅಲ್ಲಿರತಕ್ಕ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥಾ ಉದಾಹರಣೆಗಳು ನಡೆದದ್ದು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂಥಾ ಉದಾಹರಣೆಗಳು ಯಾವುದಾದರೂ ಸರ್ಕಾರದ ಗಮನಕ್ಕೆ ಬಂದರೆ ಅದನ್ನು ನೋಡಬಹುದು.

ಶ್ರೀ ಬಾಪುಗೌಡ.—ಈ 15 ಖಾಸಗೀ ಕಾಲೇಜುಗಳು ಏನಿವೆ ಅವುಗಳಿಗೆ 1969-70 ನೇ ಸಾಲಿಗೆ ಎಷ್ಟು ಗ್ರಾಂಟ್ ಕೊಡಬೇಕೆಂದು ವಿಚಾರ ಮಾಡಿದ್ದೀರಿ, ಮತ್ತು ಪ್ರತಿಯೊಂದು ಕಾಲೇಜಿಗೂ ಗ್ರಾಂಟ್ ಕೊಡತಕ್ಕ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—1966 ನೇ ಇಸವಿಗಿಂತ ಮುಂಚೆ ಸ್ಥಾಪಿಸಿರತಕ್ಕ ಕಾಲೇಜುಗಳಿಗೆ ಗ್ರಾಂಟ್ ಇನ್ ಏಯ್ಡ್ ರೂಲ್ಸ್ ಪ್ರಕಾರ ಗ್ರಾಂಟ್ ಸಿಕ್ಕುತ್ತದೆ. 1966 ನೇ ಇಸವಿಯಿಂದ ಈಚೆಗೆ ಸ್ಥಾಪನೆ ಮಾಡಿರತಕ್ಕ ಕಾಲೇಜುಗಳಿಗೆ ಸರ್ಕಾರದಿಂದ ಗ್ರಾಂಟ್ ಕೊಡುವುದ ಕ್ಕಾಗುವುದಿಲ್ಲ ಎಂದು ನಾನು ಸ್ಪಷ್ಟ ಮಾಡಿದ್ದೇನೆ. ಆದರೂ ಸಹ ಅಂಥಾ ಸಂಸ್ಥೆಗಳಿಗೆ ಸರ್ಕಾರ ದಿಂದ 50 ಪರ್ಸೆಂಟ್ ಆ್ಯಡ್‌ಹಾಕ್ ಗ್ರಾಂಟ್ ಕೊಡುವುದಕ್ಕೆ ವಿಚಾರ ಮಾಡುತ್ತಿದ್ದೇವೆ.